ಇ) 111ಇ ಅರ್ಜಿಗಳ ಇತ್ಯರ್ಥಕ್ಕೆ 30 ದಿನಗಳ ಕಾಲಮಿತಿಯನ್ನು ನಿಗದಿಗೊಳಿಸಲಾಗಿದೆ. ಅರ್ಜಿಗಳಲ್ಲಿ ಯಾವುದಾದರೂ ತಕರಾರು ಅಥವಾ ಆರ್.ಟಿ.ಸಿ. ತಿದ್ದುಪಡಿಗೆ ಒಳಪಟ್ಟಲ್ಲಿ 60 ದಿವಸಗಳ ಕಾಲಮಿತಿಯನ್ನು ನಿಗಧಿಗೊಳಿಸಿದೆ. ಬಂಗಾರಪೇಟೆ ತಾಲ್ಲೂಕಿನಲ್ಲಿ 1021 ಸ್ವೀಕೃತಿಯಾಗಿದ್ದು, ಅವುಗಳ ಪೈಕಿ 703 ವಿಲೇ ಮಾಡಲಾಗಿದೆ. 318 ಅರ್ಜಿಗಳು ಪಹಣಿ ತಿದ್ದುಪಡಿಗಾಗಿ ತಹಶೀಲ್ದಾರರವರಲ್ಲಿ ಬಾಕಿ ಇರುತ್ತವೆ.

ಈ) ತಹಶೀಲ್ದಾರರವರಿಂದ ಪಹಣಿ ತಿದ್ದುಪಡಿಯಾಗಿ ಬಂದ ಅರ್ಜಿಗಳನ್ನು ಒಂದು ತಿಂಗಳ ಒಳಗಾಗಿ ವಿಲೇವಾರಿ ಮಾಡಲಾಗುವುದು.

ವಿವಿಧ ಕಾರಣಗಳಿಗಾಗಿ ಸರ್ಕಾರಿ ಜಮೀನು ಒತ್ತುವರಿ

403(178); ಶ್ರೀ ನಾರಾಯಣಸ್ವಾಮಿ ಎಸ್.ಎನ್.(ಬಂಗಾರಪೇಟೆ)

ಅ) ಕೋಲಾರ ಜಿಲ್ಲೆಯ ಬಂಗಾರಪೇಟೆ ಕ್ಷೇತ್ರ ವ್ಯಾಪ್ತಿಯಲ್ಲಿ ಸ್ಮಶಾನ, ಗೋಗುಂಟೆ, ಖರಾಬು, ರಸ್ತೆ, ಕಲ್ಯಾಣಿ, ಗುಂಡು ತೋಪು ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಒತ್ತುವರಿಯಾಗಿದ್ದರೆ, ಸ್ಮಶಾನ, ಗೋಗುಂಟೆ, ಖರಾಬು ರಸ್ತೆ, ಗುಂಡು ತೋಪು, ಕಲ್ಯಾಣಿಗಳ ತೆರವಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ

ಇ) ಈ ಕ್ಷೇತ್ರದ ಯಾವ ಯಾವ ಗ್ರಾಮಗಳಲ್ಲಿ ಎಷ್ಟು ವಿಸ್ತೀರ್ಣ ಒತ್ತುವರಿಯಾಗಿದೆ (ಸಂಪೂರ್ಣ ಮಾಹಿತಿಯನ್ನು ನೀಡುವುದು)?

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ಹೌದು

ಆ) ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶ ಅನ್ವಯ ಕ್ರಿಯಾ ಯೋಜನೆ ರೂಪಿಸಿದ್ದು, ಅದರಂತೆ ಒತ್ತುವರಿಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಕೋಲಾರ ಜಿಲ್ಲೆ, ಬಂಗಾರಪೇಟೆ ತಾಲ್ಲೂಕಿನಲ್ಲಿ ಸರ್ಕಾರಿ ಸ್ಮಶಾನ, ಗೋಕುಂಟೆ, ಖರಾಬು, ರಸ್ತೆ ಕಲ್ಯಾಣ, ಗುಂಡು ತೋಪು ಒತ್ತುವರಿಯಾಗಿರುವ ಬಗ್ಗೆ ಸ.ನಂ. ವಾರು ಮಾಹಿತಿ ತಯಾರಿಸಿ ಈ ಪತ್ರದೊಂದಿಗೆ ಲಗತ್ತಿಸಿದೆ.

ಔರಾದ ತಾಲ್ಲೂಕಿನ ತಹಶೀಲ್ದಾರ ಕಛೇರಿಯಲ್ಲಿ ಖಾಲಿ ಇರುವ ಹುದ್ದೆಗಳು

404(627); ಶ್ರೀ ಪ್ರಭು ಬಿ ಚೌವ್ಹಾಣ (ಔರಾದ್)

ಅ) ಬೀದರ ಜಿಲ್ಲೆಯ ಔರಾದ ತಾಲ್ಲೂಕಿನ ತಹಶೀಲ್ದಾರ್ ಕಚೇರಿಯಲ್ಲಿ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕೊರತೆ ಇರುವ ಸಿಬ್ಬಂದಿಗಳನ್ನು ತುಂಬಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು (ಖಾಲಿ ಇರುವ ಹುದ್ದೆಗಳವಾರು ವಿವರ ಒದಗಿಸುವುದು)

ಆ) ಕಂದಾಯ ಇಲಾಖೆಯ ವತಿಯಿಂದ ಜಾರಿಯಲ್ಲಿರುವ ಹೊಸ ಯೋಜನೆಗಳಾವುವು; ಸಾರ್ವಜನಿಕರಿಗೆ ಅವುಗಳಿಂದ ಆಗುವ ಪ್ರಯೋಜನೆಗಳೇನು (ಯೋಜನವಾರು ವಿವರ ಒದಗಿಸುವುದು)?

ಶ್ರೀ ವಿ.ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ಔರಾದ ತಹಶೀಲ್ದಾರ ಕಚೇರಿಯಲ್ಲಿ ಮಂಜೂರಾದ, ಭರ್ತಿಯಾದ ಹಾಗೂ ಖಾಲಿ ಇವರು ಹುದ್ದೆಗಳ ವಿವರ ಈ ಕೆಳಗಿನಂತಿದೆ.

ಕ್ರ.ಸ.	ಹುದ್ದೆಯ ವಿವರ	ಮಂಜೂರಾದ ಹುದ್ದೆ	ಭರ್ತಿಯಾದ ಹುದ್ದೆ	ಖಾಲಿ ಹುದ್ದೆ
1	ತಹಶೀಲ್ದಾರ್ ಗ್ರೇಡ–1	01	01	0
2	ತಹಶೀಲ್ದಾರ ಗ್ರೇಡ–2	01	01	0